

ವಿಶ್ವವಾಣಿ

ಸಂಪಾದಕೀಯ

ಐ.ಟಿ ದಾಳಿ ಕುರಿತು ವಿನಾಕಾರಣ ಆರೋಪ ಸಲ್ಲ

ಕಳೆದ ಮೂರು ದಿನಗಳಲ್ಲಿ ದೇಶಾದ್ಯಂತ 47 ಕಡೆ ನಡೆದ ಐ.ಟಿ ದಾಳಿಯಲ್ಲಿ ಬರೋಬ್ಬರಿ 750 ಕೋಟಿ ರು. ಅಕ್ರಮ ಆಸ್ತಿ ಪತ್ತೆಯಾಗಿದೆ. ಇವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ರಾಜಕೀಯ ವ್ಯಕ್ತಿಗಳ ಜತೆಗೆ ನಂಟು ಹೊಂದಿದವರೇ ಆಗಿದ್ದಾರೆ ಎಂಬುದನ್ನು ಐ.ಟಿ. ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಪ್ರತಿ ಸಲವೂ ಐ.ಟಿ ದಾಳಿ ನಡೆದಾಗಲೆಲ್ಲಾ ಆಡಳಿತ ಪಕ್ಷದವರ ಪಿತೂರಿ ಎಂಬ ಮಾತುಗಳು ಕೇಳಿಬರುತ್ತವೆ. ರಾಜಕೀಯವಾಗಿ ಹಣಿಯಲು ಸಾಂವಿಧಾನಿಕ ಸಂಸ್ಥೆಗಳನ್ನು ತಮ್ಮ ದಾಳವಾಗಿ ಬಳಸಿಕೊಳ್ಳುತ್ತವೆ ಎಂದು ಆರೋಪ ಮಾಡುವುದು ಸಾಮಾನ್ಯವಾಗಿದೆ. ಐ.ಟಿ., ಇ.ಡಿ ಅಧಿಕಾರಿಗಳು ತಮ್ಮ ಶ್ರಮದಿಂದ ಮಾಹಿತಿ ಸಂಗ್ರಹಿಸಿ ತೆರಿಗೆ ವಂಚಕರನ್ನು ಬಲೆಗೆ ಹಾಕಿದರೂ ಅದಕ್ಕೆ ರಾಜಕೀಯ ಬಣ್ಣ ಬಳಿಯುವುದು ರೂಢಿಯಾಗಿದೆ. ಪ್ರತಿ ಬಾರಿಯೂ ಈ ಥರ ಆರೋಪಗಳನ್ನು ಮಾಡುವುದರಿಂದ ತನಿಖಾ ಸಂಸ್ಥೆಗಳನ್ನು ಕುಗ್ಗಿಸುವ ಪ್ರಯತ್ನಗಳು ಆಗುತ್ತಿವೆ. ರಾಜಕೀಯ ವ್ಯಕ್ತಿಗಳ ವಿರುದ್ಧದ ವೈಷಮ್ಯದಿಂದಲೂ ಮಾಹಿತಿ ಬರಬಹುದು. ಆದರೆ, ಅಂತಿಮವಾಗಿ ಮಾಹಿತಿಯ ಸ್ವರೂಪ, ಖಚಿತತೆ, ತೆರಿಗೆ ವಂಚನೆ ಸಾಧ್ಯತೆ ಕುರಿತ ಸತ್ಯಾಸತ್ಯತೆಯನ್ನು ಇಲಾಖೆ ಅಧಿಕಾರಿಗಳು ತನ್ನದೇ ವಿಧಾನದಿಂದ, ಮೂಲದಿಂದ ತನಿಖೆ ನಡೆಸಿ ಖಚಿತ ಮಾಡಿಕೊಳ್ಳುತ್ತದೆ. ಹೀಗೆ ಹಲವು ಹತ್ತು ಆಯಾಮದಿಂದ ಖಚಿತಪಡಿಸಿಕೊಂಡೇ ಮೇಲಧಿಕಾರಿಗಳಿಂದ ಅನುಮತಿ ಪಡೆದು ದಾಳಿ ಮಾಡಲಾಗುತ್ತದೆ. ಅನುಮತಿ ನೀಡುವ ಮೇಲಧಿಕಾರಿಗಳೂ ದಾಖಲೆಗಳೆಲ್ಲವನ್ನೂ ಸ್ವತಃ ಅವಲೋಕಿಸಿ, ದಾಳಿಯ ಅಗತ್ಯ ಮನವರಿಕೆ ಮಾಡಿಕೊಂಡು, ದಾಳಿಗೆ ಅನುಮತಿ ನೀಡಿರುತ್ತಾರೆ. ಆದರೆ ತಮ್ಮ ಬೆಂಬಲಿಗರ ಮೇಲೆ ನಡೆದ ತೆರಿಗೆ ದಾಳಿಗಳ ಬಗ್ಗೆ ರಾಜಕೀಯ ವ್ಯಕ್ತಿಗಳು, ದಾಳಿಗಳು ರಾಜಕೀಯ ಪ್ರೇರಿತವಾಗಿವೆ, ಕಾಯಿದೆ ಬಾಹಿರವಾಗಿವೆ ಎಂದು ಆರೋಪಿಸುತ್ತಾರೆ. ಯಾವುದೇ ತನಿಖಾ ಸಂಸ್ಥೆಗಳ ದಾಳಿ ಬಗ್ಗೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಪರೀಕ್ಷಿಸುವ ಅಧಿಕಾರ ಹೊಂದಿವೆ. ಆದರೆ ಈವರೆಗೂ ಯಾರೊಬ್ಬರೂ ನ್ಯಾಯಾಲಯಕ್ಕೆ ಹೋಗಿ ಪ್ರಶ್ನಿಸಿದ್ದಿಲ್ಲ. ಅಂದರೆ ದಾಳಿ ನಡೆದಾಗ ತೆರಿಗೆ ವಂಚನೆಯ ಕುರಿತು ಪುರಾವೆಗಳು ಸಿಕ್ಕಿವೆ ಎಂದರ್ಥವಲ್ಲವೇ? ಇದರಿಂದ ಯಾರನ್ನೋ ತೃಪ್ತಿಪಡಿಸಲು ಐ.ಟಿ, ಇ.ಡಿ ದಾಳಿಗಳು ಆಗುವುದಿಲ್ಲ ಎಂಬುವುದಂತೂ ಸ್ಪಷ್ಟ.

ಸೊಂಪಾದಕೀಯ

ಒಂದು ಮತದ ಕಥೆ

ಚುನಾವಣೆಯಲ್ಲಿ ಸೋಲು ಗೆಲುವು ಇದ್ದದ್ದೇ. ವಿಧಾನಸಭೆ ಚುನಾವಣೆಯಲ್ಲೂ ಸಹ ಕೇವಲ ಒಂದೇ ಒಂದು ಮತದ ಅಂತರದಿಂದ ಸೋತ ಉದಾಹರಣೆ ಇದೆ. ಹೀಗೆಲ್ಲ ಆದಾಗ ಗದ್ದಲ, ಗಲಾಟೆ, ತಕರಾರು ಆಗುವುದುಂಟು. ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದ ನಿದರ್ಶನಗಳೂ ಇವೆ. ಆದರೆ ತಮಿಳುನಾಡಿನಲ್ಲೊಂದು ವಿಲಕ್ಷಣ ಘಟನೆ ನಡೆದಿದೆ. ಅಲ್ಲಿನ ಪಂಚಾಯ್ತಿ ಚುನಾವಣೆಯಲ್ಲಿ ಅಭ್ಯರ್ಥಿಯೊಬ್ಬರಿಗೆ ಒಂದೇ ಒಂದು ಮತ ದೊರೆತಿದೆಯಂತೆ. ಅದೇನು ಮಹಾ ಬಿಡಿ. ಹಾದಿ ಬೀದಿಯಲ್ಲಿ ಹೋಗುವವರೆಲ್ಲ ಚುನಾವಣೆಗೆ ನಿಂತರೆ ಯಾರು ಓಟು ಹಾಕುತ್ತಾರೆ ಎನ್ನಬಹುದು. ಆದರೆ ಇವರು ಬಿಜೆಪಿ ಅಭ್ಯರ್ಥಿಯಂತೆ. ಇವರಿಗೇ ಹೀಗಾದರೆ ಹೇಗೆ ಎಂಬುದು ಈಗಿನ ಪ್ರಶ್ನೆ. ಅದೂ ನಿಜವೇ. ಆದರೂ ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ, ತಾನು ಬಿಜೆಪಿ ಅಭ್ಯರ್ಥಿಯಲ್ಲ. ಪಕ್ಷೇತರನಾಗಿ ಸ್ಪರ್ಧಿಸಿದ್ದು ಎಂದು ಹೇಳಿದ್ದಾರೆ. ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಪಕ್ಷದ ಆಧಾರದಲ್ಲಿ ಚುನಾವಣೆ ನಡೆಯುವುದಿಲ್ಲ. ಹೀಗಾಗಿ ತಾಂತ್ರಿಕವಾಗಿ ಸರಿ ಇರಬಹುದು. ಆದರೆ ಆತ ಬಿಜೆಪಿ ಪದಾಧಿಕಾರಿಯೇ ಹೌದು ಎನ್ನುವವರಿದ್ದಾರೆ. ಇಷ್ಟೆಲ್ಲ ಆದಮೇಲೆ ಇದಕ್ಕಿಂತ ವಿಚಿತ್ರ ಮತ್ತು ತಮಾಷೆಯ ಸಂಗತಿಯೊಂದಿದೆ. ಅದೇನೆಂದರೆ, ಈ ಅಭ್ಯರ್ಥಿಗೆ ಬಂದಿದ್ದು ಒಂದೇ ಮತ ಎಂಬುದೇನೋ ಸರಿ. ಆದರೆ ಅವರ ಮನೆಯಲ್ಲಿ ಐವರಿದ್ದಾರಂತೆ. ಅಂದರೆ ಎಲ್ಲರೂ ಮತ ಹಾಕಿದ್ದರೆ ಐದು ಓಟ್ ಆದರೂ ಬರಬೇಕಿತ್ತಲ್ವೆ? ಮನೆಗೆ ಮಾರಿ, ಊರಿಗೆ ಉಪಕಾರಿ ಎನ್ನುವಂಥವರು ಕೆಲವರಿರುತ್ತಾರೆ. ಆದರೆ ಈ ವ್ಯಕ್ತಿಗೆ ಹೊರಗಿನ ಒಂದು ಮತವೂ ಬಿದ್ದಿಲ್ಲ. ಅದಕ್ಕೂ ಆತನ ಬಳಿ ಕಾರಣ ಮತ್ತು ವಿವರಣೆ ಇದೆ. ಅದೇನೆಂದರೆ ಆತನ ಕುಟುಂಬದ ಸದಸ್ಯರ ಮತಗಳು ಬೇರೆ ವಾರ್ಡಿನಲ್ಲಿ ಇವೆಯಂತೆ. ಹೀಗಾಗಿ ಇಲ್ಲಿ ಅವರ ಮತಗಳು ಸಿಕ್ಕಿಲ್ಲವಂತೆ. ಯಾವುದನ್ನು ನಂಬುವುದು, ಯಾವುದನ್ನು ಬಿಡುವುದು ನೀವೇ ಹೇಳಿ. ಇವರ ಮಾತು ಕೇಳಿದರೆ ರಾಜಕಾರಣಿಗಿಂತ ವಕೀಲನಂತೆ ಕಾಣುತ್ತಾರೆ. ಆದರೂ ಈ ಅಭ್ಯರ್ಥಿಯ ಪರಿಸ್ಥಿತಿ ನೋಡಿದರೆ ನಗಬೇಕೊ, ಅಳಬೇಕೊ ಅಥವಾ ಅಯ್ಯೋ ಪಾಪ ಎನ್ನಬೇಕೊ ಒಂದೂ ಗೊತ್ತಾಗದು. ಏನಕೇನ ಪ್ರಕಾರೇಣ ಪ್ರಚಾರ ಪಡೆಯಬೇಕು ಎನ್ನುತ್ತಾರೆ. ಹಾಗೆ, ಗೆದ್ದಿದ್ದರೆ ಈತನಿಗೆ ಇಷ್ಟೆಲ್ಲ ಪ್ರಚಾರ ಸಿಗುತ್ತಲೇ ಇರಲಿಲ್ಲ.ಆದರೆ ಈಗ ಈ ಸುದ್ದಿ ಫುಲ್ ವೈರಲ್.

ಸಂಪಾದಕರ ಸದ್ಯಶೋಧನೆ

ಅಭಿಮನ್ಯು ಎಂಬ ಆನೆ ಕಥೆ

ಪತ್ರಕರ್ತ ಐತಿಚಂಡ ರಮೇಶ ಉತ್ತಪ್ಪ ಅವರು ಮೈಸೂರು ದಸರಾ ಅಂಬಾರಿ ಹೊರುವ ಆನೆ 'ಅಭಿಮನ್ಯು' ಬಗ್ಗೆ ಒಂದು ಪುಸ್ತಕವನ್ನೇ ಬರೆದಿದ್ದಾರೆ. ಅಂಬಾರಿ ಹೊರುವ ಆನೆ ಬಗ್ಗೆ ಎಂಬತ್ತು ಪುಟಗಳ ಒಂದು ಪುಸ್ತಕ ಬರೆಯುವಷ್ಟು ವಿಷಯ ಇದ್ದಿರಬಹುದಾ ಎಂದು ಯಾರಿಗಾದರೂ ಆಶ್ಚರ್ಯವಾಗಬಹುದು. ಆದರೆ ರಮೇಶ ಉತ್ತಪ್ಪ ಆ ಆನೆ ಬಗ್ಗೆ ಸಾಕಷ್ಟು ಕುತೂಹಲಕರ ಮಾಹಿತಿಯನ್ನು ಈ ಕೃತಿಯಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಪುಸ್ತಕದ ಒಂದೆಡೆ ಲೇಖಕರು ಹೇಳುತ್ತಾರೆ – 'ಒಂದು ಸಾಕಾನೆ ಜನರ ಮೇಲೆ ಇಷ್ಟೊಂದು ಪರಿಣಾಮ ಬೀರಲು ಸಾಧ್ಯವೇ? ಅಂಬಾರಿ ಹೊರುವ ಅನೇಕ ಆನೆಗಳನ್ನು ನಾವು ನೋಡಿದ್ದೇವೆ. ಅವುಗಳನ್ನು ಜನ ಪ್ರೀತಿಸಿದ್ದಾರೆ. ಅಕ್ಕರೆ ತೋರಿದ್ದಾರೆ. ಆದರೆ, ಅಭಿಮನ್ಯುವಿನಷ್ಟು ಯಾವ ಆನೆಯೂ ಮನೆಮಾತಾಗಿಲ್ಲ. ಮಕ್ಕಳಿಂದ ಹಿರಿಯರ ತನಕ ಎಲ್ಲರಿಗೂ ಅಭಿಮನ್ಯು ಅಚ್ಚುಮೆಚ್ಚು. ಭಾರತದಿಂದ ವಿದೇಶಕ್ಕೆ ತೆರಳಿದವರನ್ನು, ಮೈಸೂರು ದಸರಾ ಬಗ್ಗೆ ಆಸಕ್ತಿಯಿರುವವರು 'ನಿಮಗೆ ಅಭಿಮನ್ಯು ಗೊತ್ತಾ?' ಎಂದು ಕೇಳುತ್ತಾರೆ. 'ಗೊತ್ತು' ಎಂದರೆ ಅವನ ಬಗ್ಗೆ ಹೇಳಿ ಅಂತಾರೆ. ಮಹಾನ್ ವ್ಯಕ್ತಿಯೊಬ್ಬನ ಊರಿನಿಂದ ಬಂದಂತೆ ಇಷ್ಟಪಡುತ್ತಾರೆ. ಇದು ಅಭಿಮನ್ಯುವಿನ ಖ್ಯಾತಿ. ಹುಲಿಗಳ ಸೆರೆ ಕಾರ್ಯಾಚರಣೆಯಲ್ಲೂ ಅಭಿಮನ್ಯು ಎತ್ತಿದ ಕೈ. ಅವನ ಧೈರ್ಯಕ್ಕೆ ಸರಿಸಾಟಿ ಇಲ್ಲ. ಕಾರ್ಯಾಚರಣೆ ವೇಳೆ ಇತರ ಆನೆಗಳು ಹುಲಿ ವಾಸನೆ ಬರುತ್ತಿದ್ದಂತೆ ಮುಂದೆ ಹೋಗಲು ಅಂಜಿದರೆ ಅಭಿಮನ್ಯು ಮಾತ್ರ ಹುಲಿ ವಾಸನೆ ಜಾಡು ಹಿಡಿದು ಹೋಗುತ್ತಾನೆ. ಕೆಲವು ಸಂದರ್ಭಗಳಲ್ಲಿ, ಅಭಿಮನ್ಯು ಮೇಲೆ ಹುಲಿ ದಾಳಿಯಾಗಿವೆ. ಆಗ ಅತ್ಯಂತ ಚಾಕಚಕ್ಯತೆಯಿಂದ ಹುಲಿ ದಾಳಿಯಿಂದ ತಪ್ಪಿಸಿಕೊಂಡು ತನ್ನ ಮೇಲಿರುವ ಮಾವುತ ಮತ್ತು ಸಿಬ್ಬಂದಿಯನ್ನು ಅಭಿಮನ್ಯು ರಕ್ಷಿಸಿದ್ದಾನೆ.' ಜಂಬೂ ಸವಾರಿಯಲ್ಲಿ ಭಾಗವಹಿಸಿ ರೂಢಿಯಾದ ಕಾರಣದಿಂದ ಅಭಿಮನ್ಯು ರಾಷ್ಟ್ರಗೀತೆ ಹೇಳುತ್ತಿದ್ದಂತೆ ಜಾಗೃತನಾಗಿ ಎರಡೂ ಕಾಲು ಮತ್ತು ಸೊಂಡಿಲನ್ನು ಎತ್ತಿ ಗೌರವಸೂಚಿಸುತ್ತಾನೆ. ಉಳಿದ ಆನೆಗಳಿಗೆ ಮಾವುತ ಸೂಚಿಸ ಬೇಕು. ಆದರೆ ಅಭಿಮನ್ಯು ಹಾಗಲ್ಲ. ಸ್ವಯಂಪ್ರೇರಿತನಾಗಿ ರಾಷ್ಟ್ರ ಗೀತೆಗೆ ವಂದನೆ ಸೂಚಿಸುತ್ತಾನೆ. ಸುಮಾರು ಇಪ್ಪತ್ತೊಂದು ವರ್ಷಗಳ ಕಾಲ ದಸರಾ ಮಹೋತ್ಸವದಲ್ಲಿ ಭಾಗವಹಿಸಿದ್ದರೂ, ಅಭಿಮನ್ಯುವಿಗೆ ಅಂಬಾರಿ ಹೊರುವ ಅವಕಾಶ ಸಿಕ್ಕಿರಲಿಲ್ಲ. ಅಷ್ಟು ವರ್ಷ ಆತ ಅರಮನೆ ವಾದ್ಯಗೋಷ್ಠಿ ಎಳೆದು ಸಾಗುತ್ತಿದ್ದ. ಅರ್ಜುನ ಅಂಬಾರಿ ಹೊತ್ತು ಸಾಗುವುದನ್ನು ನೋಡಿ ಸಮಾಧಾನಪಟ್ಟಿದ್ದ. ಆದರೆ ಹಿಂದಿನ ವರ್ಷ, ಅಭಿಮನ್ಯುವಿಗೆ ಅಂಬಾರಿ ಹೊರುವ ಅವಕಾಶ ಒದಗಿ ಬಂದಿತು. ಆ ಕೈಂಕರ್ಯವನ್ನು ಆತ ಅತ್ಯಂತ ಸಮರ್ಪಕವಾಗಿ ನೆರವೇರಿಸಿದ. ಅರ್ಜುನನಿಗೆ ಅಂಬಾರಿ ಕಟ್ಟಿದ ಬಳಿಕ ಮೆರವಣಿಗೆಯಲ್ಲಿ ಸಾಗುವಾಗ ತುಸು ವಾಲಿದಂತೆ ಕಂಡು ಬರುತ್ತಿತ್ತು. ಅದಕ್ಕೆ ಆತನ ಎತ್ತರ ಕಾರಣವಾಗಿತ್ತು. ಆದರೆ ಅಭಿಮನ್ಯು ಮಾತ್ರ ಅಂಬಾರಿ ಹೊರಲು ಹೇಳಿ ಮಾಡಿಸಿದಂತಿದ್ದ. ಆನೆ, ಹುಲಿಗಳ ದಾಳಿಯಾದಾಗ, ಅರಣ್ಯ ಅಧಿಕಾರಿಗಳು ಅಭಿಮನ್ಯು ಸಹಾಯ ಪಡೆಯುತ್ತಿದ್ದರು. ಸಾವದುರ್ಗದಲ್ಲಿ ಆನೆಯೊಂದು ವ್ಯಕ್ತಿಯೊಬ್ಬನನ್ನು ಸಾಯಿಸಿದಾಗ, ಆ ಪುಂಡ ಆನೆಯನ್ನು ಸೆರೆ ಹಿಡಿಯಲು ಅಭಿಮನ್ಯು ನೆರವಾಗಿದ್ದ. ಒಮ್ಮೆ ಹಾರಂಗಿ ಹಿನ್ನೀರಿನಲ್ಲಿ ತೇಲಿ ಹೋಗುತ್ತಿದ್ದ ಆನೆ ಮರಿಯೊಂದನ್ನು ಈಜಿ ರಕ್ಷಿಸಿದ್ದ. ಅದೇ ರೀತಿ ಕೆರೆಯ ಕೆಸರಿನಲ್ಲಿ ಸಿಲುಕಿ, ಜೀವನ್ಮರಣದ ನಡುವೆ ಹೋರಾಡುತ್ತಿದ್ದ ಗಂಡಾನೆಯನ್ನು ರಕ್ಷಿಸಿದ್ದ. ರಮೇಶ ಉತ್ತಪ್ಪ ಅವರು ಅಭಿಮನ್ಯು ಕಥೆಯನ್ನು ಹೇಳುತ್ತಾ ನಮ್ಮನ್ನು ಬೇರೆ ಲೋಕಕ್ಕೆ ಕರೆದೊಯ್ಯುತ್ತಾರೆ.

ಪತ್ರಕರ್ತರಿಗೆ ಸಂಪಾದಕ ಎಂಬ ಹುದ್ದೆ, ಗೌರವಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಪತ್ರಕರ್ತರಿಗೆ ಯಾರಾದರೂ Go to hell ಅಂತ ಬೈದರೆ, ತಕ್ಷಣ hell ಗೆ ಹೋಗಲು ಸಾಧ್ಯವಾಗುವುದಾದರೆ ಅದರಂಥ ಅದ್ಭುತ ಇನ್ನೊಂದಿಲ್ಲವಂತೆ. ಕಾರಣ ನರಕದಲ್ಲಿ ಸಿಗುವಷ್ಟು ಸ್ಟೋರಿಗಳು ಬೇರೆಲ್ಲೂ ಸಿಗುವುದಿಲ್ಲವಂತೆ. ಅದೇ ಯಾರಾದರೂ ಪತ್ರಕರ್ತರನ್ನು ಸ್ವರ್ಗಕ್ಕೆ ಕಳಿಸಿದರೆ ಹೆಚ್ಚೆಂದರೆ ಅಲ್ಲಿ ಆತನಿಗೆ ಭಾನುವಾರದ ಪುರವಣಿಗೆ ಮುಖಪುಟ ಲೇಖನಕ್ಕೆ ಒಂದು ವಸ್ತು ಸಿಗಬಹುದು. ಪತ್ರಕರ್ತರು ಇರಬೇಕಾದ ಜಾಗ ನರಕವೇ ಹೊರತು ಸ್ವರ್ಗವಲ್ಲ. ಒಂದು ವೇಳೆ ಒಬ್ಬ ಕ್ರಿಯಾಶೀಲ ಪತ್ರಕರ್ತನನ್ನು ಪ್ರಧಾನಿ ಅಥವಾ ಮುಖ್ಯಮಂತ್ರಿಯ ಮಾಧ್ಯಮ ಕಾರ್ಯದರ್ಶಿಯನ್ನಾಗಿ ನೇಮಿಸಿದರೆ ಏನಾಗುತ್ತದೆ? ಅಲ್ಲಿಗೆ ಅವನಲ್ಲಿರುವ ಪತ್ರಕರ್ತನನ್ನು ಕತ್ತು ಹಿಸುಕಿ ಸಾಯಿಸಿದಂತಾಗುತ್ತದೆ. ಅಲ್ಲಿಗೆ ಒಂದು ಅಧ್ಯಾಯ ಮುಗಿದಂತಾಗುತ್ತದೆ. ಪತ್ರಕರ್ತ ಕೆಟ್ಟು ಎಲ್ಲಿ ಬೇಕಾದರೂ ಸೇರಬಹುದು. ಆದರೆ ಅಧಿಕಾರದ ಅಂತಃಪುರವನ್ನು ಮಾತ್ರ ಸೇರಬಾರದು.

ಕಾರಣ ಆತ ಜನ್ಮೇಪಿ ಸೇರಬೇಕಾದ ಜಾಗ ಅದಲ್ಲ. ಅಧಿಕಾರಕ್ಕೂ ಪತ್ರಕರ್ತನಿಗೂ ಆಗಿ ಬರುವುದೇ ಇಲ್ಲ. ಪತ್ರಕರ್ತನಾದವನು ಯಾವಾಗ ಅಧಿಕಾರದ ಪಡಸಾಲೆಯಲ್ಲಿ ನೆರಳು ಕಂಡುಕೊಳ್ಳುತ್ತಾನೋ, ಅಂದು ಅಲ್ಲಿ ಅವನ ಸಮಾಧಿ ಆದ ಹಾಗೆ. ಆತ ಮತ್ತೆಂದೂ ಮೊದಲಿನ ವರ್ಚಸ್ಸು, ಧಿಮಾಕು, ಧೀಮಂತತನ ಪ್ರದರ್ಶಿಸಲಾರ. ಆತ ಯಾವ ರಾಜಕಾರಣಿಯ ಚಾಕರಿ ಮಾಡಿದ್ದನೋ ಅವನ ಸೇವಕನಾಗಿ, ಹಂಗಿನ ಅರಮನೆಯ ದಾಸನಾಗಿ ಇರುವುದರಲ್ಲಿ ಆನಂದ ಕಾಣುತ್ತಾನೆಯೇ ಹೊರತು ಪತ್ರಕರ್ತನ ನಿರ್ಭೀತತನ, ಧಾಡಸಿತನ, ನೇರವಂತಿಕೆಯೆಲ್ಲ ಮಡಚಿಟ್ಟ ಹಾಸಿಗೆಯಂತೆ ನಾಗಂತಿಕೆ ಸೇರಿರುತ್ತದೆ.

ಪತ್ರಕರ್ತ ಮತ್ತು ಅಧಿಕಾರದಲ್ಲಿರುವ ರಾಜಕಾರಣಿ ಎಷ್ಟು ಹತ್ತಿರ ಇರಬೇಕು ಎಂದು ಒಮ್ಮೆ ಖ್ಯಾತ ಪತ್ರಕರ್ತ ಪೊತೆನ್ ಜೋಸೆಫ್ ಅವರನ್ನು ಕೇಳಿದರಂತೆ ಅದಕ್ಕೆ ಅವರು ಹೇಳಿದ್ದು – 'ಪತ್ರಕರ್ತರು ರಾಜಕಾರಣಿಗಳಿಗೆ ಎಂದೂ ಹತ್ತಿರ ಇರಲೂ ಬಾರದು ಮತ್ತು ಹತ್ತಿರವಾಗಲೂಬಾರದು.' 'ಹಾಗಾದರೆ ಪತ್ರಕರ್ತರು ರಾಜಕಾರಣಿಗಳಿಂದ ಎಷ್ಟು ದೂರ ಇರಬೇಕು?' ಎಂದು ಅವರನ್ನು ಕೇಳಿದಾಗ, ಪೊತೆನ್ ಜೋಸೆಫ್ ಹೇಳಿದ್ದು – 'ಎಷ್ಟು ಸಾಧ್ಯವೋ ಅಷ್ಟು ದೂರ ಇರಬೇಕು.' ಪ್ರತಿದಿನ ರಾಜಕಾರಣಿಗಳನ್ನು ಭೇಟಿ ಮಾಡಿ ಮಾಡಿ ಇಬ್ಬರ ಮಧ್ಯೆ ಒಂದು ರೀತಿಯ ಸಲುಗೆ, ಅನ್ಯೋನ್ಯ ಸ್ನೇಹ ಬೆಳೆಯುತ್ತದೆ. ಯಾರಿಗೂ ಸಿಗದ ಸುದ್ದಿ ತನಗೇ ಸಿಗಲಿ ಎಂಬ ಕಾರಣಕ್ಕೆ ಪತ್ರಕರ್ತನಾದವನು ರಾಜಕಾರಣಿಯ ಸಾಮೀಪ್ಯ ಬಯಸುತ್ತಾನೆ. ಈ ಅನ್ಯೋನ್ಯತೆಯಿಂದ ಯಾರಿಗೂ ಸಿಗದ ಸುದ್ದಿ ತನಗೆ ಮಾತ್ರ ಸಿಗುತ್ತದೆ ಎಂಬ ಭ್ರಮೆಯಲ್ಲಿ ಇರುವಂತೆ ರಾಜಕಾರಣಿ ಮಾಡುತ್ತಾನೆ ಎಂಬ ಸಂಗತಿ ಪತ್ರಕರ್ತನಿಗೆ ಕೊನೆಗೂ ಗೊತ್ತಾಗುವುದಿಲ್ಲ.

ಈ ಕಾರಣಕ್ಕೇ ರಾಜಕಾರಣಿಗೆ ಹತ್ತಿರವಾಗಬಾರದು. ಅದರಲ್ಲೂ ಪತ್ರಕರ್ತನಾಗಿಯೇ ರಾಜಕಾರಣಿಯ ಹಿಂದೆ ಹೋಗಬಾರದು. ತನ್ನ ಹಿಂದೆ ರಾಜಕಾರಣಿ ಬರುವಂಥ ವ್ಯಕ್ತಿತ್ವವನ್ನು ಬೆಳೆಸಿಕೊಂಡರೆ ಮಾತ್ರ ಅಂಥ ಅನ್ಯೋನ್ಯತೆಯಲ್ಲಿ ಸುದ್ದಿ ಸಿಗಲು ಸಾಧ್ಯ. ಇಲ್ಲವಾದರೆ ರಾಜಕಾರಣಿಯ ಮನೆ ಮರ್ಜಿ ಕಾಯುವುದಷ್ಟೇ ಪತ್ರಕರ್ತನ ಕೆಲಸವಾಗುತ್ತದೆ. ಆಗ ಘನತೆಯನ್ನು ಅಡ ಇಟ್ಟು ಅಲ್ಲಿಗೆ ಹೋಗಿರುತ್ತಾನೆ. ಒಮ್ಮೆ ಈ ರೀತಿ ಅಡ ಇಡುವವರು ಎಂಬುದು ಗೊತ್ತಾದರೆ ಅಡ ಇಟ್ಟಿದ್ದನ್ನು ವಾಪಸ್ ಪಡೆಯಲು ಆಗುವುದಿಲ್ಲ. ರಾಜಕಾರಣಿ ಯ ಜತೆ ಸಂಪರ್ಕ ಇರುವುದು ತಪ್ಪಲ್ಲ, ಆದರೆ ಇದು ಸಂಬಂಧವಾಗಿ ಅಥವಾ ಸಖ್ಯವಾಗಿ ಪರಿವರ್ತನೆ ಆಗಲು ಬಿಡಬಾರದು. ಸಂಪರ್ಕದಲ್ಲಿ ಬೆಳೆದ ಬಳ್ಳಿ ಬೆಳೆಯುತ್ತಾ ಸಂಬಂಧಕ್ಕೆ ತಳಕು ಹಾಕುವುದಕ್ಕೆ ಬಿಡಬಾರದು. ಹಾಗಂತ ಪರಸ್ಪರರು ವೈರಿಗಳಲ್ಲ, ಆ ರೀತಿ ವರ್ತಿಸಬೇಕಿಲ್ಲ.

ಬ್ರಿಟನ್ನಿನಲ್ಲಿ ಎಪ್ಪತ್ತರ ದಶಕದವರೆಗೂ ಒಂದು ಸಂಪ್ರದಾಯವಿತ್ತು. ಅಧಿಕಾರವಹಿಸಿಕೊಂಡ ನಂತರ ಮೊದಲ ಬಾರಿಗೆ ಪ್ರಧಾನಿ ಹಾಗೂ ಪತ್ರಕರ್ತರು ಮುಖಾಮುಖಿಯಾದಾಗ, ಹಿರಿಯ ಪತ್ರಕರ್ತ ಎದ್ದು ನಿಂತು ತನ್ನ ಸಹೋದ್ಯೋಗಿಗಳೆಲ್ಲರ ಪರವಾಗಿ, 'ಇಷ್ಟು ದಿನ ನಾವಿಬ್ಬರೂ ಅನ್ಯೋನ್ಯವಾಗಿದ್ದೆವು. ಇನ್ನು ಮುಂದೆ ನಾವು ಪತ್ರಕರ್ತರು ಮತ್ತು ನೀವು ಪ್ರಧಾನಿ. ನಿಮ್ಮನ್ನು ಟೀಕಿಸುವ ನಮ್ಮ ಹಕ್ಕನ್ನು ಗೌರವಿಸಿ, ನಮ್ಮ ಹಕ್ಕನ್ನು ಸಂಪೂರ್ಣವಾಗಿ ಚಲಾಯಿಸುವುದನ್ನು ಒಪ್ಪಿಕೊಳ್ಳಿ' ಎಂದು ಹೇಳುತ್ತಿದ್ದ. ಅಲ್ಲಿ ತನಕ 'ಹಾಯ್ ಜಾನ್', 'ಹಾಯ್ ಟೋನಿ' ಎಂದು ಕರೆಯುತ್ತಿದ್ದ ಪತ್ರಕರ್ತರು, ಆತ ಅಧಿಕಾರದಿಂದ ಕೆಳಗಿಳಿಯುವ ತನಕ ಮಿಸ್ಟರ್ ಜಾನ್, ಮಿಸ್ಟರ್ ಪ್ರೈಮ್ ಮಿನಿಸ್ಟರ್, ಮಿಸ್ಟರ್ ಟೋನಿ ಎಂದು ಸಂಬೋಧಿಸುತ್ತಿದ್ದರು. ಇದು ಇಂದಿನಿಂದ ಪತ್ರಕರ್ತರು ಮತ್ತು ಅಧಿಕಾರದಲ್ಲಿರುವವರ ನಡುವೆ ಒಂದು ಗೋಡೆ ನಿರ್ಮಾಣವಾದುದರ ಸಂಕೇತ ಎಂದು ಪರಿಗಣಿಸುತ್ತಿದ್ದರು. ಇದು ಅಧಿಕಾರದಲ್ಲಿರುವ ರಾಜಕಾರಣಿ ಜತೆ ಪತ್ರಕರ್ತರು ಒಂದು ಅಂತರ ಕಾಪಾಡಿಕೊಳ್ಳಬೇಕು ಎಂಬುದರ ದ್ಯೋತಕವಾಗಿತ್ತು.

ಪ್ರಧಾನಿ ಕಾರ್ಯಾಲಯದಲ್ಲಿ ಸುಮಾರು ಇಪ್ಪತ್ತೆರಡು ವರ್ಷಗಳ ಕಾಲ ಪತ್ರಿಕಾ ಕಾರ್ಯದರ್ಶಿಯಾಗಿ ಕೆಲಸ ಮಾಡಿದ, ಕನ್ನಡಿಗ ಎಚ್.ವೈ.ಶಾರದಾ ಪ್ರಸಾದ ಅವರು 'ದಿ ಏಶಿಯನ್ ಏಜ್' ಪತ್ರಿಕೆಯಲ್ಲಿ ಬರೆದ HowMuch Distance Is Too Much With Ministers ಎಂಬ ಲೇಖನ ಓದುತ್ತಿದ್ದೆ. ಪತ್ರಕರ್ತರೆಲ್ಲ ಓದಲೇ ಬೇಕಾದ ಲೇಖನವಿದು. ಶಾರದಾ ಪ್ರಸಾದ ಅವರು 'ಫ್ರೀ ಪ್ರೆಸ್ ಜರ್ನಲ್' ಮತ್ತು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಬಹಳ ವರ್ಷಗಳ ಕಾಲ ಉಪ ಸಂಪಾದಕರಾಗಿ, ಸುದ್ದಿ ಸಂಪಾದಕರಾಗಿ ಕೆಲಸ ಮಾಡಿದವರು. ನಂತರ ಕೇಂದ್ರ ಸರಕಾರದ ಯೋಜನಾ ಆಯೋಗ ಪ್ರಕಟಿಸುತ್ತಿದ್ದ 'ಯೋಜನಾ' ಪತ್ರಿಕೆಯ ಸಂಪಾದಕರಾದರು. ಆ ಸಂದರ್ಭದಲ್ಲಿ ಅವರು ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರ ಸಂಪರ್ಕಕ್ಕೆ ಬಂದರು. ಇಂದಿರಾ ಅವರು ಶಾರದಾ ಪ್ರಸಾದ ಅವರ ಕೆಲಸವನ್ನು ಪ್ರತ್ಯಕ್ಷವಾಗಿ ಬಲ್ಲವರಾಗಿದ್ದರು. ಒಂದು ದಿನ ಶಾರದಾ ಪ್ರಸಾದ ಅವರಲ್ಲಿ 'ನೀವು ನನ್ನ ಪತ್ರಿಕಾ ಕಾರ್ಯದರ್ಶಿಯಾಗಿ ಕೆಲಸ ಮಾಡಬಹುದಾ?' ಎಂದು ಕೇಳಿದರಂತೆ. ಸಾಮಾನ್ಯವಾಗಿ ಪ್ರಧಾನಿ ಅವರಿಂದ ಇಂಥ ಕೋರಿಕೆ ಬಂದಾಗ ಯಾರೂ ಇಲ್ಲ ಎನ್ನುವುದಿಲ್ಲ ಮತ್ತು ಸ್ಥಳದಲ್ಲಿಯೇ ಒಪ್ಪಿಗೆ ಸೂಚಿಸಿ ಬಿಡುತ್ತಾರೆ. ಪ್ರಧಾನಿ ಕಾರ್ಯಾಲಯ (ಪಿಎಂಒ) ದಲ್ಲಿ ಕೆಲಸ ಮಾಡುವುದೆಂದರೆ ಸಾಮಾನ್ಯದ ಸಂಗತಿಯೇನಲ್ಲ, ನಸೀಬು ಚೆನ್ನಾಗಿರುವವರಿಗೆ ಮಾತ್ರ ಅಂಥ ಲಾಟರಿ ಹೊಡೆಯುವುದು.

ಆದರೆ ಶಾರದಾ ಪ್ರಸಾದ ಒಂದು ವಾರ ಸಮಯಾವಕಾಶ ಕೇಳಿದರಂತೆ. ಒಂದು ವಾರ ಸಾಕಷ್ಟು ಯೋಚಿಸಿದರಂತೆ. ಸ್ವತಃ ಪ್ರಧಾನಿ ಇಂದಿರಾ ಗಾಂಧಿ ಅವರೇ ಕೇಳಿದ್ದಾರೆ ಎಂದ ಮೇಲೆ ಒಪ್ಪಿಕೊಳ್ಳಬಹುದು. ಆದರೆ ನನ್ನ ಮುಂದಿನ ಜೀವನವೇನು? ಇಷ್ಟು ವರ್ಷಗಳ ಕಾಲ ಪತ್ರಕರ್ತನಾಗಿ ಕೆಲಸ ಮಾಡಿದ್ದೇನೆ, ಆ ವೃತ್ತಿಯ ಜತೆಗಿನ ನನ್ನ ಸಂಬಂಧ ಏನು? ಇಂದಿರಾ ಗಾಂಧಿ ಅಧಿಕಾರದಿಂದ ಕೆಳಗಿಳಿದ ನಂತರ ನನ್ನ ಮುಂದಿನ ಮಾರ್ಗ ಯಾವುದು? ಪತ್ರಕರ್ತನಾಗಿ ನನ್ನ ಅಸ್ತಿತ್ವವೇನು?.. ಈ ಎಲ್ಲಾ ಸಂಗತಿಗಳ ಬಗ್ಗೆ ಸುದೀರ್ಘವಾಗಿ ಯೋಚಿಸಿದರಂತೆ. ಕೊನೆಗೆ ಅವರು ನೋಟ್ ಮಾಡಿಕೊಂಡರಂತೆ – 'ಒಮ್ಮೆ ರಾಜಕಾರಣಿಯ ಜತೆ ಕೆಲಸ ಮಾಡಿದ ನಂತರ ನಾನು ಯಾವುದೇ ಕಾರಣಕ್ಕೂ ಪತ್ರಕರ್ತನಾಗಿ ಕೆಲಸ ಮಾಡಕೂಡದು. ರಾಜಕಾರಣಿಯ ಜತೆ ಕೆಲಸ ಮಾಡುವಾಗ ಪತ್ರಕರ್ತನಾಗಿ ಗಳಿಸಿದ ಅನುಭವ ಸಹಕಾರಿ ಆಗಬಹುದು. ಆದರೆ ಅಂತರಂಗದಲ್ಲಿ ಪತ್ರಕರ್ತನಾದವನು ಸತ್ತು ಹೋಗಿರುತ್ತಾನೆ. ಹೀಗಾಗಿ ನಾನು ಯಾವುದೇ ಕಾರಣಕ್ಕೂ ಇನ್ನು ಮುಂದೆ ಪತ್ರಿಕೆಗಳಲ್ಲಿ ಕೆಲಸ ಮಾಡಬಾರದು. ಇಂದಿಗೆ ನನ್ನೊಳಗಿನ ಪತ್ರಕರ್ತ ಸತ್ತು ಹೋದ.' ಈ ನಿರ್ಧಾರದೊಂದಿಗೆ ಅವರು ಇಂದಿರಾ ಗಾಂಧಿ ಅವರಿಗೆ ಪತ್ರಿಕಾ ಕಾರ್ಯದರ್ಶಿಯಾಗಿ ಸೇರಿಕೊಂಡರು. ಅದಾದ ಬಳಿಕ ಮೊರಾರ್ಜಿ ದೇಸಾಯಿ, ಪುನಃ ಇಂದಿರಾ ಗಾಂಧಿ ಮತ್ತು ನಂತರ ರಾಜೀವ್ ಗಾಂಧಿ ಅವರಿಗೆ ಪತ್ರಿಕಾ ಕಾರ್ಯದರ್ಶಿಯಾಗಿದ್ದರು. 22 ವರ್ಷಗಳ ಕಾಲ ಪ್ರಧಾನಿ ಕಾರ್ಯಾಲಯದಲ್ಲಿದ್ದಾಗ, ಪತ್ರಿಕಾ ಕಚೇರಿಗಳ ಕಡೆ ಮುಖ ಹಾಕಲಿಲ್ಲ. ಪ್ರಧಾನಿ ಕಾರ್ಯಾಲಯದಿಂದ ಹೊರ ಬಂದ ನಂತರ ಯಾವ ಪತ್ರಿಕೆಗೂ ಎಡತಾಕಲಿಲ್ಲ. ಅವರು ಪತ್ರಿಕೆಗಳಿಗೂ ಬರೆಯಬಾರದು ಎಂದು ನಿರ್ಧರಿಸಿದ್ದರು. ಆದರೆ ಎಂ.ಜೆ.ಅಕ್ಬರ್ ಅವರ ಒತ್ತಾಯಕ್ಕೆ ಮಣಿದು ಸುಮಾರು ಎರಡು ವರ್ಷಗಳ ಕಾಲ 'ಏಶಿಯನ್ ಏಜ್' ಪತ್ರಿಕೆಗೆ ಬರೆದರು. ಆದರೆ ಶಾರ ದಾ ಪ್ರಸಾದ ಅವರ ಹೆಚ್ಚುಗಾರಿಕೆ ಏನೆಂದರೆ ಅವರು ಪ್ರಧಾ ನಿ ಕಾರ್ಯಾಲಯದಲ್ಲಿದ್ದಾಗ, ಪತ್ರಕರ್ತರಂತೆ ಇದ್ದರು. ಅಲ್ಲಿಂದ ಹೊರ ಬಂದ ನಂತರ ಬುದ್ಧಿಪೂರ್ವಕವಾಗಿ ನೇಪಥ್ಯಕ್ಕೆ ಸರಿದರು. ಒಂದು ಒಂದು ಸಲ ಗಾಂಧಿ ಕುಟುಂಬ ದ ಬಗ್ಗೆ ಹೊಗಳಲೂ ಇಲ್ಲ, ತೆಗಳಲೂ ಇಲ್ಲ, ಆ ಕುಟುಂಬದ ವಕ್ತಾರಿಕೆಯನ್ನೂ ಮಾಡ'ಲಿಲ್ಲ. ಆ ವಿಷಯವನ್ನು ಎಂದೂ ಟಚ್ ಮಾಡಲೇ ಇಲ್ಲ.

'ಅಧಿಕಾರದ ಅಂತಃಪುರದೊಳಗೆ ಇದಷ್ಟು ಹೊತ್ತು ನಿಮ್ಮೊಳಗಿನ ಪತ್ರಕರ್ತ ಚೀರುತ್ತಾ, ಸಾಯುತ್ತಾ ಇರುತ್ತಾನೆ. ಅವನನ್ನು ಬದುಕಿಸುವುದು ಬಹಳ ಕಷ್ಟದ ಕೆಲಸ. ಆದರೆ ಬಹಳ ಪತ್ರಕರ್ತರು ಬದುಕಿಸುವ ಪ್ರಯತ್ನ ಮಾಡಿ ವಿಫಲರಾಗುತ್ತಾರೆ. ಅಧಿಕಾರದ ಗರ್ಭ ಗುಡಿಯೊಳಗೆ ಹೋಗಿ ಬಂದ ನಂತರ ಪುಣ್ಯಕ್ಕಿಂತ ಪಾಪವೇ ಹೆಚ್ಚು ಮೆತ್ತಿಕೊಳ್ಳುತ್ತವೆ. ಈ ಎಚ್ಚರಿಕೆಯಿಂದ ಕೆಲಸ ಮಾಡಿದರೂ ಅದರಿಂದ ಮುಕ್ತರಾಗುವುದು ಸಾಧ್ಯವಿಲ್ಲ' ಎಂದು ಶಾರದಾ ಪ್ರಸಾದ ಹೇಳುತ್ತಿದ್ದರು. ಇಂದಿಗೂ ಪ್ರಧಾನಿ ಮತ್ತು ಮುಖ್ಯಮಂತ್ರಿಯ ಪತ್ರಿಕಾ ಅಥವಾ ಮಾಧ್ಯಮ ಕಾರ್ಯದರ್ಶಿ ಹೇಗೆ ಕೆಲಸ ಮಾಡಬೇಕು ಮತ್ತು ಹೇಗೆ ವ್ಯಕ್ತಿತ್ವ ಕಾಪಾಡಬೇಕು ಎಂಬುದಕ್ಕೆ ಶಾರದಾ ಪ್ರಸಾದರಂಥ ಇನ್ನೊಬ್ಬ ಆದರ್ಶ ವ್ಯಕ್ತಿ ಇಲ್ಲ.

ಪತ್ರಕರ್ತ ಸಂಜಯ ಬಾರು ಅವರು ಪ್ರಧಾನಿ ಡಾ. ಮನಮೋಹನ ಸಿಂಗ್ ಅವರಿಗೆ ಮಾಧ್ಯಮ ಕಾರ್ಯದರ್ಶಿಯಾಗಿದ್ದರು. ಬಾರು ಅವರಿಗೂ ಶಾರದಾ ಪ್ರಸಾದ ಅವರೇ ಆದರ್ಶ. ಆದರೆ ಅವರು ತಮ್ಮ ಪದವಿಯಿಂದ ನಿರ್ಗಮಿಸುವ ಹೊತ್ತಿಗೆ ಅತ್ಯಂತ ವಿವಾದಾತ್ಮಕ ವ್ಯಕ್ತಿ ಆಗಿದ್ದರು. ಅವರು ಬರೆದ 'Accidental Prime Minister' ತೀವ್ರ ವಿವಾದಕ್ಕೆ ಕಾರಣವಾಯಿತು. ಅದನ್ನಾ ಧರಿಸಿ ಸಿನಿಮಾ ಸಹ ಬಂತು. ಇನ್ನು ಮುಂದೆ ಬಾರು ಅಂಕಣ ಬರೆದುಕೊಂಡಿರಬಹುದೇ ಹೊರತು ಯಾವ ಪತ್ರಿಕಾ ಮಾಲೀಕನೂ ಅವರನ್ನು ಸಂಪಾದಕನನ್ನಾಗಿ ನೇಮಿಸಿಕೊಳ್ಳಲಿಕ್ಕಿಲ್ಲ.

ಸಾಮಾನ್ಯವಾಗಿ ಪತ್ರಕರ್ತರು ತಮ್ಮ ನಿವೃತ್ತಿಯ ಅಂಚಿನಲ್ಲಿದ್ದಾಗ ಅಥವಾ ನಿವೃತ್ತರಾದ ನಂತರ ಇಂಥ ಅಸೈನ್‌ಮೆಂಟ್‌ಗಳನ್ನು ಒಪ್ಪಿಕೊಳ್ಳುತ್ತಾರೆ. ಇನ್ನು ತಮ್ಮ ವೃತ್ತಿ ಬದುಕಿನಲ್ಲಿ ಹೆಚ್ಚಿನ ಅಥವಾ ಮಹತ್ತರವಾದ ಸ್ಥಾನ-ಮಾನ, ಅವಕಾಶ ಸಿಗಲಿಕ್ಕಿಲ್ಲ ಎಂದು ಭಾವಿಸಿದವರು ಮುಖ್ಯಮಂತ್ರಿ ಅಥವಾ ಪ್ರಧಾನಿ ಅವರ ಪತ್ರಿಕಾ/ಮಾಧ್ಯಮ ಕಾರ್ಯದರ್ಶಿ ಯಾಗಿ ಅಥವಾ ಸಲಹೆಗಾರರಾಗಿ ಸೇರುತ್ತಾರೆ. ಈ ರೀತಿ ಸೇರುವುದು ಅಲ್ಲಿ ತನಕ ತಾವು ಸಾಧಿಸಿದ ವೃತ್ತಿ ಗರಿಮೆಗೆ ತಿಲಾಂಜಲಿ ಇಟ್ಟಂತೆ ಎಂಬ ಎಚ್ಚರಿಕೆ ಮತ್ತು ಅಪಾಯದ ಮುನ್ಸೂಚನೆ ಇರಲೇಬೇಕು. ಇದು ನಿಜವೂ ಹೌದು. ಬಹಳ ಪತ್ರಕರ್ತರು ಮಾಡುವ ಪ್ರಮಾದವೂ ಇದೇ. ಅಷ್ಟು ವರ್ಷಗಳ ತನಕ ಕಾಪಾಡಿಕೊಂಡಿದ್ದ ನಿಷ್ಪಕ್ಷಪಾತತನ, ವೃತ್ತಿ ಪಾವಿತ್ರ್ಯವೆಲ್ಲ ಒಂದೇ ಸಲಕ್ಕೆ ನೀರಿನಲ್ಲಿ ಹೋಮ ಮಾಡಿಬಿಡುತ್ತಾರೆ. ಅಧಿಕಾ ರ ಅಥವಾ ಇನ್ನಿತರ ಪ್ರಲೋಭನೆಗಳಿಂದ ರಾಜಕಾರಣ ದ ಪಡಸಾಲೆಯನ್ನು ಸೇರಿಬಿಡುತ್ತಾರೆ. ಅಲ್ಲಿ ರಾಜಕಾರಣಿಗಳ ಚಾಕರಿ ಮಾಡಿಕೊಂಡಿರುತ್ತಾರೆ. ಅದಕ್ಕಿಂತ ಹೆಚ್ಚಾಗಿ ತಾವೇ ರಾಜಕಾರಣಿಗಳ ದಲ್ಲಾಳಿಗಳಂತೆ, ವಕ್ತಾರರಂತೆ ವರ್ತಿಸಲಾರಂಭಿಸುತ್ತಾರೆ.

ಅಲ್ಲಿಗೆ ಅವರ ಪತ್ರಿಕೋದ್ಯಮ ಬದುಕು ಮೂರಾಬಟ್ಟೆಯಾದಂತೆ. ಇದನ್ನು ಮಾಡಲು ಪತ್ರಿಕೋದ್ಯಮ ಮಾಡಬೇಕಿರಲಿಲ್ಲ, ಅಷ್ಟು ವರ್ಷಗಳ ಕಾಲ ಪತ್ರಕರ್ತರಾಗಿ ಕೆಲಸ ಮಾಡಬೇಕಿರಲಿಲ್ಲ. ಒಬ್ಬ ಪತ್ರಕರ್ತ ಎಂದೂ ದ್ವೀಪವಲ್ಲ, ಒಬ್ಬ ಸಂಪಾದಕ ನಡುಗಡ್ಡೆಯಲ್ಲ, ಆತ ತನ್ನ ಸುತ್ತ ತನಗರಿವಿಲ್ಲದಂತೆ ಅಪಾರ ಸಂಖ್ಯೆಯ ಅಭಿಮಾನಿಗಳನ್ನು, ಅನುಯಾಯಿಗಳನ್ನು ಹೊಂದಿರುತ್ತಾನೆ. ಪತ್ರಕರ್ತನನ್ನು ಅನುಕರಿಸುವ ಓದುಗರಿರುತ್ತಾರೆ. ಸಂಪಾದಕರನ್ನು ಅನುಸರಿಸುವ ಜನರಿರುತ್ತಾರೆ. ಒಬ್ಬ ಸಂಪಾದಕನೋ, ಪತ್ರಕರ್ತನೋ ಎಂದಿಗೂ ಓದುಗನ ಕಣ್ಣಲ್ಲಿ ಸಣ್ಣವರಾಗಬಾರದು. ಆದರ್ಶಮಯ ಬದುಕನ್ನು ಬದುಕಲು ಸಾಧ್ಯವಾಗದಿದ್ದರೂ ನಾವು ಬರೆದಂತಾದರೂ ಬದುಕಬೇಕು. (ಕುಮಾರಸ್ವಾಮಿ ಎರಡು ಮದುವೆಯಾಗಿದ್ದನ್ನು ಟೀಕಿಸಲಿ, ಆದರೆ ಹಾಗೆ ಟೀಕಿಸುವಾಗ ತಾವೂ ಇಬ್ಬಿಬ್ಬರನ್ನು ಕಟ್ಟಿಕೊಂಡಿರಬಾರದು.)

ಒಬ್ಬ ಸಂಪಾದಕ ಅಥವಾ ಪತ್ರಕರ್ತ ಏಕಾಏಕಿ ರಾಜಕಾರಣಿಯ ಪಡಸಾಲೆ ಸೇರಿಬಿಟ್ಟರೆ, ಬಹಳ ಬೇಸರವಾಗುವುದು ಅವನನ್ನು ಅಷ್ಟು ವರ್ಷಗಳ ಕಾಲ ಹಿಂಬಾಲಿಸಿದ ಓದುಗರಿಗೆ! ಓದುಗರು ಇದ್ದಕ್ಕಿದ್ದಂತೆ ಪೆಚ್ಚಾಗಿಬಿಡುತ್ತಾರೆ. ಅವರಿಗೆ ಯಾವ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಎಂಬುದು ಗೊತ್ತಾಗುವುದಿಲ್ಲ, ಇದು ಅರುಣ್ ಶೌರಿ ಹಠಾತ್ತನೆ ಬಿಜೆಪಿ ಸೇರಿದಾಗ ಅನೇಕರಿಗೆ ಹೀಗೆ ಆಗಿತ್ತು. ಬರೆದರೆ ಶೌರಿ ಥರ ಬರೆಯಬೇಕು ಎಂದು ಅಂದುಕೊಂಡವರಿಗೆ ಅದನ್ನು ಅರಗಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ದೇಶದ ಅಪರೂಪದ ತನಿಖಾ ಪತ್ರಕರ್ತ ಎಂಬ ಜನಪ್ರಿಯತೆಯಲ್ಲಿದ್ದಾಗ ಅವರ ರಾಜಕೀಯ ಪ್ರವೇಶ ಅನೇಕರಿಗೆ ನುಂಗಲಾರದ ತುತ್ತಾಗಿತ್ತು. ಶೌರಿ ಬಿಜೆಪಿಯನ್ನೂ ಸೇರಿದರು, ವಾಜಪೇಯಿ ಸರಕಾರದಲ್ಲಿ ಮಂತ್ರಿಯೂ ಆದರು. ಇಷ್ಟು ವರ್ಷಗಳ ಕಾಲ ಅವರು ಒಂದು ತತ್ವ, ಸಿದ್ಧಾಂತಗಳಿಗೆ ಹೋರಾಡಿದ್ದು ಕೊನೆಗೆ ಇಷ್ಟಕ್ಕೇ ನಾ ಎಂದು ಅನೇಕರಿಗೆ ಅನಿಸಿದ್ದರೆ ಆಶ್ಚರ್ಯವಿಲ್ಲ. ತಮ್ಮ ಅಪಾರ ಅಭಿಮಾನಿಗಳಲ್ಲಿ ಅವರು ಭ್ರಮನಿರಸನ ಹುಟ್ಟಿಸಿಬಿಟ್ಟರು. ಮಂತ್ರಿಯಾಗಿ ಮಾಡಿದ್ದು ಅಷ್ಟಕ್ಕಷ್ಟೇ. ಹೇಳಿಕೊಳ್ಳುವಂಥ ಘನಂದಾರಿ ಕೆಲಸವನ್ನೇನೂ ಮಾಡಲಿಲ್ಲ. ಅವರ ರಾಜಕಾರಣವೂ ತೀರಾ abrupt ಆಗಿ ಮುಗಿದು ಹೋಯಿತು. ಅದಕ್ಕಿಂತ ಮೊದಲೇ ಪತ್ರಕರ್ತ 'ಶೌರಿ' ಸತ್ತು ಹೋಗಿದ್ದರು!

ಪ್ರಜಾವಾಣಿ ಖ್ಯಾತ ಸಂಪಾದಕರಾಗಿದ್ದ ಟಿ.ಎಸ್. ರಾಮಚಂದ್ರರಾಯರು (ಟಿಯೆಸ್ಸಾರ್) ಅಂದಿನ ಮುಖ್ಯಮಂತ್ರಿಗಳಾದ ದೇವರಾಜ ಅರಸ ಅವರಿಗೆ ತೀರಾ ಆಪ್ತರಾಗಿದ್ದರು. ಆದರೆ ಟೀಕಿಸುವ ಸಂದರ್ಭ ಬಂದಾಗಲೆಲ್ಲ ರಾಜಿ ಮಾಡಿಕೊಂಡವರಲ್ಲ, ತಮ್ಮ ಪ್ರಖ್ಯಾತ 'ಛೂಬಾಣ' ಅಂಕಣದಲ್ಲಿ ಮುಖ್ಯಮಂತ್ರಿಗಳನ್ನು ತೀಕ್ಷ್ಣವಾಗಿ ಟೀಕಿಸುತ್ತಿದ್ದರು.

ಒಮ್ಮೆ ಅರಸು ಅವರು ತಮ್ಮ ಸಲಹೆಗಾರರಾಗಿ ಬರುವಂತೆ ಟಿಯೆಸ್ಸಾರರನ್ನು ಕರೆದಿದ್ದರು. ಆದರೆ ಟಿಯೆಸ್ಸಾರ್ ಅದನ್ನು ಒಪ್ಪಿಕೊಳ್ಳಲಿಲ್ಲ, ಸರಕಾರದ ಹೊರಗಿದ್ದೇ ಅರಸು ಅವರಿಗೆ ಸಲಹೆಗಳನ್ನು ನೀಡುತ್ತಿದ್ದರು. ಅರಸು ಎಷ್ಟೇ ವರಾತ ಮಾಡಿದರೂ ಟಿಯೆಸ್ಸಾರ್ ಒಪ್ಪಲಿಲ್ಲ. ಗರ್ಲ್‌ಫ್ರೆಂಡ್ ಆಗಿರುವುದಕ್ಕೂ, ಮದುವೆಯಾಗಿ ಹೆಂಡತಿಯಾಗುವುದಕ್ಕೂ ಸಾಕಷ್ಟು ವ್ಯತ್ಯಾಸ ಇದೆ ಎಂಬುದು ಅವರಿಗೆ ಗೊತ್ತಿತ್ತು. ಹಾಗಂತ ಅರಸು ಅವರ ಸಾಮೀಪ್ಯವನ್ನು ದುರುಪಯೋಗ ಪಡಿಸಿಕೊಳ್ಳಲಿಲ್ಲ. ಟಿಯೆಸ್ಸಾರ್ ನಿಧನರಾಗುವಾಗ ಅವರ ಮನೆಯಲ್ಲಿದ್ದ ಕೈ ಕಿತ್ತುಹೋದ, ಕಾಲು ಮುರಿದು ಹೋದ ಕುರ್ಚಿ ಅವರ ಮತ್ತು ಅರಸು ಗೆಳೆತನದ ನಿಷ್ಠುರತೆಯ ಮೂಕ ಸಾಕ್ಷಿಗಳಾಗಿದ್ದವು. ಇಂದಿಗೂ ಕನ್ನಡ ಪತ್ರಿಕೋದ್ಯಮ ದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಟಿಯೆಸ್ಸಾರ್ ಹೆಸರಿ ನಲ್ಲಿ ಪ್ರಶಸ್ತಿ ಕೊಡುತ್ತಾರೆ. ರಾಜಕೀಯ ಮತ್ತು ಪತ್ರಿಕೋದ್ಯಮ ಮಧ್ಯೆ ಎಷ್ಟು ಅಂತರ ಕಾಪಾಡಬೇಕು ಎಂಬುದಕ್ಕೆ ಅವರು ಉತ್ತಮ ನಿದರ್ಶನ.

ಇಲ್ಲಿ ಖ್ಯಾತನಾಮ ಪತ್ರಕರ್ತ ಖಾದ್ರಿ ಶಾಮಣ್ಣ ಅವರನ್ನು ನೆನಪಿಸಿಕೊಳ್ಳಬೇಕು. ಖಾದ್ರಿ ಅವರು ಪತ್ರಕರ್ತರಾಗಿದ್ದಾಗಲೇ ರಾಜಕೀಯದಲ್ಲಿ ಕ್ರಿಯಾಶೀಲರಾಗಿದ್ದರು. 1951ರ ಲೋಕಸಭಾ ಚುನಾವಣೆಯಲ್ಲಿ ಸೋಷಿಯಲಿಸ್ಟ್ ಪಾರ್ಟಿಯಿಂದ ತುಮಕೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ದ್ದರು. ಕಾಂಗ್ರೆಸ್ಸಿನ ಸಿ.ಆರ್.ಬಸಪ್ಪ ಅವರ ವಿರುದ್ಧ ಸೆಣಸಿ ಸೋತಿದ್ದರು. ಖಾದ್ರಿ ಅವರ ರಾಜಕೀಯ ಒಲವು-ನಿಲುವುಗಳೇನೇ ಇದ್ದರೂ ಜನ ಅವರನ್ನು ಇಷ್ಟಪಟ್ಟಿದ್ದು ಒಬ್ಬ ಧೀಮಂತ ಪತ್ರಕರ್ತ ಎನ್ನುವ ಕಾರಣಕ್ಕೆ. ಸಂಪಾದಕೀಯ ಬರಹದ ಮೂಲಕವೇ ಕನ್ನಡದ ಮನೆಮಾತಾದವರು ಖಾದ್ರಿ. ಸಾಮಾನ್ಯವಾಗಿ ಪತ್ರಿಕೆಗಳಲ್ಲಿ ಅಷ್ಟಾಗಿ ಓದದ ಸಂಪಾದಕೀಯ ಬರಹ ವನ್ನು ಎಲ್ಲರ ಗಮನಸೆಳೆಯುವಂತೆ ಮಾಡಿದವರು ಅವರು. ಖಾದ್ರಿ ಶಾಮಣ್ಣ ಅವರು ನಿರ್ಭೀತ ಪತ್ರಿಕೋದ್ಯಮಕ್ಕೆ ಹೆಸರಾದವರು.

ರಾಮಕೃಷ್ಣ ಹೆಗಡೆ ಸಿಎಂ ಆಗಿದ್ದಾಗ ಖಾದ್ರಿ ಅವರನ್ನು ವಿಧಾನ ಪರಿಷತ್ತಿನ ಸದಸ್ಯರಾಗಿ ನೇಮಿಸಿದರು. ಖಾದ್ರಿ ಅವರು ಅದಕ್ಕೆ ಅರ್ಹರಾಗಿದ್ದರು. ಆದರೆ ಖಾದ್ರಿ ಅವರು ತಮ್ಮ ಪತ್ರಿಕೆಯನ್ನು ಹೆಗಡೆ ಅವರ ಗುಣಗಾನಕ್ಕೆ ಮೀಸಲಾಗಿಟ್ಟು ಬಿಟ್ಟರು. ಹೆಗಡೆ ಏನೇ ಮಾಡಲಿ, ಹೇಳಲಿ, ಅದು ಮುಖಪುಟ ಸುದ್ದಿಯಾಗುತ್ತಿತ್ತು. ಇದು ಹೆಗಡೆ ಅವರ ಕರವಸ್ತ್ರ ಎಂದು ಓದುಗರು ಮಾತಾಡಿಕೊಳ್ಳುವ ಹಂತ ತಲುಪಿತು. ಪತ್ರಿಕೆಯ ಪ್ರಸಾರವೂ ಕುಸಿಯಿತು. ಎಂಎಲ್‌ಸಿ ಪದವಿ ಕರುಣಿಸಿದ್ದಕ್ಕಾಗಿ ಖಾದ್ರಿ ಅವರು ತಮ್ಮೆಲ್ಲ ಘನತೆಯನ್ನು ಹೆಗಡೆ ಅವರಿಗೆ ಗಿರವಿ ಇಡಬೇಕಿರಲಿಲ್ಲ ಎಂದು ಓದುಗರು ಮಾತಾಡಿಕೊಳ್ಳುವಂತಾಯಿತು. ಖಾದ್ರಿ ಅವರು ಅಲ್ಲಿಯವರೆಗೆ ಕಾಯಕವಾಗಿ ನೆರವೇರಿಸಿಕೊಂಡ ಬಂದ ನಿರ್ಭೀತ ಮತ್ತು ನಿಷ್ಪಕ್ಷಪಾತ ಪತ್ರಿಕೋದ್ಯಮಕ್ಕೆ, ಈ ರಾಜಕೀಯ ಭಿಕ್ಷೆಯಿಂದಾಗಿ ಎಲ್ಲೋ ಕಳಂಕ ತಟ್ಟಿತು. ಇಂಥ ಪ್ರಲೋಭನೆಗಳಿಗೆ ಮಣಿಯುವ ಸಂಪಾದಕರು ಖಾದ್ರಿ ಅವರನ್ನು ನೋಡಿ ಎಚ್ಚೆತ್ತುಕೊಳ್ಳಬೇಕು.

ಆತ ಯಾವ ಪತ್ರಿಕೆಯ ಸಂಪಾದಕನೇ ಆಗಿರಬಹುದು, ಅದರ ಪ್ರಸಾರ ಎಷ್ಟೇ ಇರಬಹುದು, ಅವನ ಪಾಲಿಗೆ ಅವನ ಪತ್ರಿಕೆಯ ಸಂಪಾದಕ ಸ್ಥಾನಕ್ಕಿಂತ ಮಿಗಿಲಾದ ಮತ್ತೊಂದು ದೊಡ್ಡ ಸ್ಥಾನ ಇರಲು ಸಾಧ್ಯವೇ ಇಲ್ಲ, ಅದೇ ಪತ್ರಕರ್ತನಿಗೆ ಪರಮ ಭೂಷಣವಾದುದು. ಸಂಪಾದಕ ಸ್ಥಾನವೆಂಬುದು ಅತಿ ದೊಡ್ಡ ಗೌರವ. ಆ ಸ್ಥಾನದ ಮುಂದೆ ಉಳಿದುದೆಲ್ಲವೂ ಚಿಕ್ಕವೇ. ಇನ್ನು ನಿಗಮ, ಮಂಡಳಿ, ಅಕಾಡೆಮಿ ಸ್ಥಾನಗಳೆಲ್ಲ ಯಾವ ಮರದ ತೊಪ್ಪಲು?!

ಡಿ.ವಿ.ಜಿಯವರ ಸಾಹಿತ್ಯ ಶಕ್ತಿ

ಪ್ರಾಣೇಶ ಪ್ರಪಂಚ

ಗಂಗಾವತಿ ಪ್ರಾಣೇಶ
vveditoped@gmail.com

ಭಾಷಣ ಕೇಸರಿಯಾದ ನಾನು ಬರವಣಿಗೆಗೆ ಬಂದದ್ದೇ ವಿಶ್ವೇಶ್ವರ ಭಟ್ಟರ ಬಲವಂತಕ್ಕೆ. ಇದೇನಿದು, ಇವನು ತನ್ನನ್ನು ತಾನೇ ಭಾಷಣ ಕೇಸರಿ ಅಂದುಕೊಂಡನಲ್ಲ? ಎಂದು ಹುಬ್ಬೇರಿಸಿ ಕೋಪಿಸಿಕೊಳ್ಳಬೇಡಿ. ಅದು ಭಾಷಣಕೇಸರಿ ಅಲ್ಲ, ಭಾಷಣಕ್ಕೇ ಸರಿ, ಬರೆಯಲು ಬರುವುದಿಲ್ಲ ಎಂದು ತೀರ್ಮಾನಿಸಿ ಕೊಂಡವನನ್ನು ಬರಹಕ್ಕೆ ಎಳೆದು ತಂದವರು ಭಟ್ಟರು ಎಂದು ಹೇಳಿದ್ದಷ್ಟೆ ಮಾರಾಯ್ರೆ. ಒಲ್ಲೆ ಒಲ್ಲೆ ಎನ್ನುತ್ತಲೆ ಬರೆಬರೆದು ಬರೊಬ್ಬರಿ ನೂರಾ ಎಂಭತ್ತು ಲೇಖನಗಳಾದವು. ಮೂವತ್ತು ಪುಸ್ತಕಗಳನ್ನು ಹೊರತರಲು ಮೂವತ್ತು ಲೇಖನಗಳಾ ಗುವುದನ್ನೇ ಕಾಯುವವರು, ಅಪರೂಪದ ಪ್ರಕಾಶಕರಾದ ಸಾವಣ್ಣ ಪಬ್ಲಿಷರ್ಸ್‌ನ ಸಹೃದಯಿ ಸ್ನೇಹಜೀವಿ ಜಮೀಲ್ ಸಾಹೇಬರು.

ನನಗೆ ಗೊತ್ತಿರುವ ಆತ್ಮೀಯರಾದವರು ಕರ್ನಾಟಕದ ಇಬ್ಬರೇ ಇಬ್ಬರು ಪ್ರಕಾಶಕರು. ಈ ಜಮೀಲ್ ಸಾಹೇಬರು ಹಾಗೂ ಹುಬ್ಬಳ್ಳಿಯ ಸಾಹಿತ್ಯ ಭಂಡಾರದ ಶ್ರೀ ಸುಬ್ರಹ್ಮಣ್ಯ ಅವರು. ಅವರನ್ನು ಪ್ರೀತಿಯಿಂದ ಸುಬ್ಬಣ್ಣ, ಸುಬ್ಬು ಅವರೇ ಎಂದೇ ಕರೆಯುತ್ತೇನೆ. ಹುಬ್ಬಳ್ಳಿಗೆ ಹೋದರೆ ಸುಬ್ರಹ್ಮಣ್ಯರನ್ನು ಭೇಟಿಯಾಗದೇ, ಸಾಹಿತ್ಯ ಭಂಡಾರಕ್ಕೆ ಹೋಗದೇ ಇರಲಾಗುವುದಿಲ್ಲ. ಹೋದರೆ, ನಾಲ್ಕೈದು ಪುಸ್ತಕಗಳನ್ನು ನಾನು ಖರೀದಿಸಿದರೆ, ಹತ್ತು ಹನ್ನೆರೆಡು ಪುಸ್ತಕಗಳನ್ನು ಗಂಟು ಕಟ್ಟಿ, ಪ್ಯಾಕ್ ಮಾಡಿ, ಓದುವ ಪ್ರೀತಿಗಾಗಿ ಎಂದು ಉಚಿತವಾಗಿ ಕೊಡುವ ಸುಬ್ರಹ್ಮಣ್ಯರ ಗ್ರಂಥ ಋಣ ನನ್ನ ಮೇಲೆ ದಿನೇ ದಿನೇ ಹೆಚ್ಚುತ್ತಲಿದೆ.

ಹಾಗೆಯೇ, ಸಾವಣ್ಣದ ಜಮೀಲ್ ಸಾಹೇಬರೂ ಕೂಡಾ, ನನ್ನ ಪುಸ್ತಕಗಳ ಪಾರ್ಸಲ್ ಜತೆಗೆ, ತಮ್ಮ ಪ್ರಕಾಶನದ ಪ್ರಕಟಣೆಗಳನ್ನೆಲ್ಲ ನನ್ನ ಪಾರ್ಸಲ್ ಬಾಕ್ಸಿನಲ್ಲಿ ಸುತ್ತಲೂ ಇಟ್ಟಿರುತ್ತಾರೆ. ಓದುಗರನ್ನು, ಓದುವಿಕೆಯನ್ನು ಪ್ರೋತ್ಸಾಹಿಸುತ್ತಿರುವ ಇಂಥ ಮಹನೀಯರೇ ಕನ್ನಡದ ಕಟ್ಟಾಳುಗಳಾಗಲಿ, ಭಾಷಣ ಮಾಡುವ ನಾವುಗಳು ಅಲ್ಲವೇ ಅಲ್ಲ ಎನಿಸುತ್ತಿರುತ್ತದೆ ಇವರ ಈ ಔದಾರ್ಯವನ್ನು ಕಂಡಾಗ.

ಹಾಗೆ ಇತ್ತೀಚೆಗೆ ಹುಬ್ಬಳ್ಳಿಗೆ ಹೋದಾಗ, ಸ್ನೇಹಿತ ಸುಬ್ರಹ್ಮಣ್ಯರು ಕೆಲವು ಪುಸ್ತಕಗಳ ಜತೆ ಡಿ.ವಿ.ಜಿ ಯವರ 1950 ರಲ್ಲಿ ಕಾವ್ಯಾಲಯ ಪ್ರಕಾಶನದಿಂದ ಪ್ರಕಟವಾಗಿ ಈಗ ಸಾಹಿತ್ಯ ಪ್ರಕಾಶನ ಹುಬ್ಬಳ್ಳಿಯಿಂದ ಇದೇ ವರ್ಷ 2021 ರಲ್ಲಿ ಮೊದಲ ಮುದ್ರಣವಾದ ಸಾಹಿತ್ಯ ಶಕ್ತಿ ಎಂಬ ಡಿ.ವಿ.ಜಿ ಮಾಡಿದ ಹನ್ನೆರೆಡು ಉಪನ್ಯಾಸಗಳು ಎಂಬ ಪುಸ್ತಕ ಕೊಟ್ಟಿದ್ದರು. ಓದುತ್ತಾ ಹೋದಂತೆ ಬರಹ, ಭಾಷಣಗಳು ಹೇಗಿರಬೇಕು ಎಂಬುದಕ್ಕೆ 1950ನೇ ಇಸವಿಯ ಆ ಪುಸ್ತಕ ಇಂದಿಗೂ ಮಾದರಿ, ಕೈಗನ್ನಡಿ ಎನಿಸಿಬಿಟ್ಟಿತು. ಅಲ್ಲಿನ ಲೇಖನಗಳಲ್ಲಿ ಅದೇನು ಕನ್ನಡ ಪದಗಳ ವಿಜೃಂಭಣೆ, ಅದೆಷ್ಟು ನಿಖರವಾದ ಜ್ಞಾನ ಆ ಹಿರಿಯರದು ಎನಿಸಿಬಿಟ್ಟಿತು. ಇವರು ಹೇಳಿರುವ ಕನ್ನಡ ಪದಗಳನ್ನು ಉಚ್ಚರಿಸಲೂ ನಮಗೆ ಬರುತ್ತಿಲ್ಲ, ಆ ಯೋಗ್ಯತೆಯೂ ಇಲ್ಲ ಎನಿಸಿಬಿಟ್ಟಿತು. ಹನ್ನೆರಡು ಉಪನ್ಯಾಸಗಳ ಈ ಪುಸ್ತಕ, ಐವತ್ತು ಪುಸ್ತಕಗಳ ಅನೇಕ ಗ್ರಂಥಗಳ, ರಾಮಾಯಣ, ಮಹಾಭಾರತ, ಭಗವದ್ಗೀತೆಗಳ ಬಗೆಗೂ ಓದುಗ, ಕೇಳುಗರಲ್ಲಿ ಆಸಕ್ತಿ ಹುಟ್ಟಿಸುವ ಅಪರೂಪದ ವಾಗ್ಮಿತೆಗೆ ಉದಾಹರಣೆ. 'ಐತರೇಯ ಶ್ರುತಿ'ಯ ಈ ವಾಕ್ಯ 'ಮಾತು ನನ್ನ ಮನಸ್ಸಿನಲ್ಲಿ ನೆಲೆಸಿರತಕ್ಕದ್ದು; ಮನಸ್ಸು ನನ್ನ ಮಾತಿನಲ್ಲಿ ನೆಲೆಸಿರತಕ್ಕದ್ದು' ಎಂಬ ಉಕ್ತಿಗೆ ಇಲ್ಲಿನ ಉಪನ್ಯಾಸಗಳಿವೆ.

ಸಾಹಿತ್ಯ, ಕಾವ್ಯಗಳ ಆಸಕ್ತಿ ಇದೊಂದು ಯಜ್ಞದ ತರಹ ಇರಬೇಕೆಂದು ತೈತ್ತೀರಿಯ ಶೃತಿಯ ವಾಕ್ಯಗಳ ಉಲ್ಲೇಖ ಇದನ್ನು ಸಾರಸ್ವತ ಯಜ್ಞ ಎಂದು ವರ್ಣಿಸಿರುವುದಂತೂ ಮಾತನಾಡುವವರೆಲ್ಲರೂ ತಿಳಿದಿರಲೇಬೇಕಾದ ಪರಮ ಸತ್ಯ, ಬಾಯಿಗೆ ಬಂದಂತೆ ಮಾತನಾಡುವ ನಾವುಗಳು ಈ ಶ್ಲೋಕವನ್ನು ಇದರ ಅರ್ಥವನ್ನು ಕಲ್ಪನೆಯಲ್ಲೂ ಊಹಿಸಲಾರೆವು

ಚಿತ್ತಿಃಸ್ರುಕ್ । ಚಿತ್ತಮಾಜ್ಯಮ್ । ವಾಗ್ವೇದಿಃ । ಆಧೀತಂ ಬರ್ಹಿಃ । ಕೇತೋಗ್ನಿಃ । ವಿಜ್ಞಾನ ಮಗ್ನಿಃ । ವಾಕ್ಪಹೋರ್ತಾ । ಮನ ಉಪವಕ್ತಾ । ಪ್ರಾಣೋ ಹವಿಃ । ಸಾಮಾಧ್ವರ್ಯುಃ ॥

(ಮಾತನಾಡುವಾಗ, ವಿಕಾರವಲ್ಲದ ಅಂತಃಕರಣವೇ ಸವುಟು; ಆಕಾರ ತಳೆದ ಅಂತಃಕರಣವೇ ಆಜ್ಯಃ । ವಾಕ್ಯೇಯಜ್ಞ ವೇದಿಕೆ: ನುಡಿಯುವ ಮಾತೇ ಧರ್ಬೆ: ಕೇವಲ ಜ್ಞಾನವೇ ಅಗ್ನಿ ; (ಆಹವನೀಯ); ಉದ್ದೇಶ ಮಿಶ್ರಿತ ಜ್ಞಾನವೇ ಇನ್ನೊಂದು ಅಗ್ನಿ (ಗಾರ್ಹಪತ್ಯ): ವಾಕ್ಯ ಶಕ್ತಿಯುಳ್ಳವನೇ ಮಂತ್ರ ಹೇಳುವ ಹೋತೃ: ಮನಸ್ಸೇ ಸರಿ ನೋಡುವ ಉಪವಕ್ತ: ಪ್ರಾಣವೇ ಹವಿಸ್ಸು : ಗಾನವೇ ಪುರೋಹಿತ' ಈ ವಿಧವಾದದ್ದನ್ನು ಸಾರಸ್ವತ ಯಜ್ಞ ಎಂದು ಕರೆಯುತ್ತಾರೆ)

ಇದನ್ನು ಓದಿ ನನಗೆ ರೋಮಾಂಚನವಾಗಿ ಹೋಯಿತು. ಇದನ್ನು ಅರಿತು ಹೀಗೆ ಮಾತನಾಡುವವರು ಯಾರಾದರೂ ಇದ್ದಾರೆಯೇ? ನಮ್ಮ ಅಸೆಂಬ್ಲಿಗಳಲ್ಲಿ ನಮ್ಮ ರಾಜಕಾರಣಿಗಳ ಮಾತು, ಜಗಳ, ರೋಷ, ದರ್ಪ, ಭುಜ ತಟ್ಟಿಕೊಳ್ಳುವುದು, ಬಟ್ಟೆಯನ್ನೆ ಬಿಚ್ಚಿ ಹೆಗಲಿಗೆ ಹಾಕಿಕೊಳ್ಳುವುದು, ಅಂಗಿಯನ್ನೆ ಕಳಚಿ ತೂರುವುದು ಆಹಾ. ಎಂಥ ಈ ನೆಲದ ಮೇಲೆ ಎಂಥ ಜನರು ಹುಟ್ಟಿದ್ದೇವೆ ಎನಿಸಿಬಿಡುತ್ತದೆ. ಇನ್ನು ಕೆಲವು ಪ್ರಗತಿಪರ, ಬುದ್ಧಿಜೀವಿಗಳೆನಿಸಿಕೊಂಡವರ ಸಾಹಿತ್ಯ, ಕಾವ್ಯಗಳಂತೂ ಶಾಸ್ತ್ರ, ಪುರಾಣ, ಧರ್ಮ ದೇವರುಗಳನ್ನು ಜರಿಯುವುದೇ ನಿಂದಿಸುವುದೇ ಅವಹೇಳನಗೈಯ್ಯುವುದೇ, ಅವರನ್ನು ಬುದ್ಧಿವಂತರೆಂದು ಹೇಳಿಕೊಳ್ಳುವ ಅಳತೆ ಗೋಲಾಗಿಬಿಟ್ಟಿದೆ. ಹೀಗೆ ಬೈದ, ಬೈಯ್ಯುವ ಬುದ್ಧಿವಂತಿಕೆಗೆ ನಮ್ಮ ಸರಕಾರಗಳು ಪ್ರಶಸ್ತಿಗಳನ್ನು ಕೊಟ್ಟು ಆಯಕಟ್ಟಿನ ಸ್ಥಳಗಳಲ್ಲಿ ಎತ್ತರದಲ್ಲಿ ಕೂರಿಸುತ್ತವೆ ಆದರೆ, ಇಲ್ಲಿ ಶ್ರೀಯುತ ಡಿ.ವಿ.ಜಿ ಬರೆಯುವುದನ್ನು ಓದಿರಿ, ಸಾಹಿತ್ಯ ಶಕ್ತಿ ಎಂದರೆ 'ಶಾಸ್ತ್ರದ ಆಸಕ್ತಿ' ಎಂದು ಯಾರೂ ಅರ್ಥ ಮಾಡಲಾರರು ವಿಜ್ಞಾನಾದಿ ಶಾಸ್ತ್ರಗಳು ನಮ್ಮ ದೇಶದಲ್ಲಿ ಅಭಿವೃದ್ಧಿಪಡೆಯ ಬೇಕೆಂದು ಆಸೆಪಟ್ಟುಕೊಂಡಿರುವವರಲ್ಲಿ ನಾನೂ ಒಬ್ಬ. ಆದ ರೆ, ಶಾಸ್ತ್ರವು ಸಾಹಿತ್ಯವನ್ನು ಬಿಟ್ಟಾಗ ಒಣಗಿದ ಮರುಭೂಮಿ ಯಾದೀತು. ವಿತಂಡವಾದಕ್ಕೆ ದಾರಿ ಮಾಡೀತು' ಎಂದಿದ್ದಾರೆ.

ಶಾಸ್ತ್ರ-ಕಾವ್ಯಗಳೆರೆಡೂ ಜತೆ ಜತೆಯಲ್ಲಿ ಇರಬೇಕಾದವು. ನಮ್ಮ ಎರಡು ಕಣ್ಣುಗಳಂತೆ, ನಮ್ಮ ಎರಡು ಕಾಲುಗಳಂತೆ, ಅವು ಅನ್ಯೋನ್ಯ ಸಹಕಾರಿಗಳು ಎರಡೂ ಸ್ನೇಹದಿಂದ ಒಟ್ಟಿಗೆ ನಡೆದಾಗ ಮನುಷ್ಯ ಜೀವನದ ಉತ್ಕರ್ಷ, ಮನನೀಯ, ಸತ್ಯವಾದ ಮಾತುಗಳು. ಇಂದು ಏನು ಬರೆದರೂ ಅದು ಸಾಹಿತ್ಯ ಎಂದೇ ತಿಳಿದಿದ್ದಾರೆ. ಹೀಗಾಗಿ ಯಾರೂ ಯಾರು ಬರೆದಿದ್ದನ್ನೂ ಓದುತ್ತಿಲ್ಲ, ತಾವೇ ಬರೆದು ತಾವೇ ಓದಿಕೊಳ್ಳುತ್ತಿದ್ದಾರೆ.

'ಜೇನು ತುಪ್ಪ ಬಾಯಿಗೆ ಸಿಹಿಯಾದಂತೆ ರಕ್ತಕ್ಕೆ ಶುದ್ಧಕಾರಿ. ಅದರಂತೆ ಸಾಹಿತ್ಯ ರಸ ಮನಸ್ಸಿಗೆ ಇಂಪಾದಂತೆ ಜೀವಕ್ಕೆ ಸಂಸ್ಕಾರಕಾರಿಯೂ ಆಗುತ್ತದೆ. ಭಕ್ಷ್ಯವೇ ಔಷಧವೂ ಆಗುವಂ ಥ ವಿಶೇಷ ಅದರದು, ನಾಲಿಗೆಗೆ ದೊರೆಯುವುದು ಶುಚಿಯಾದರೆ, ಮೇಲಕ್ಕೆ ಕಾಣಿಸದೇ ಜೀವದೊಳಕ್ಕೆ ಇಳಿಯುವುದು ಸತ್ವ. ಸಾಹಿತ್ಯವೆಂದರೆ ಅದು ಎದೆಯನ್ನು ಅಲುಗಿಸುವಂಥಹ ಮಾತು. ಯಾವ ವಾಕ್ಯವನ್ನು ಓದಿದರೆ, ಅಥವಾ ಕೇಳಿದರೆ, ನಮ್ಮ ಹೃದಯದಲ್ಲಿ ಒಂದಾನೊಂದು ಚಲನೆಯ ಅನುಭವ ಉಂಟಾಗುತ್ತದೆಯೋ, ಆ ವಾಕ್ಯವೇ ಸಾಹಿತ್ಯ. ಸಾಹಿತ್ಯದ ಸಾರಭಾಗ ಕಾವ್ಯ, ಮನಸ್ಸಿಗೆ ಒಂದು ಹಿತ, ಒಂದು ರಮಣೀಯವಾದ ವಿಕಾರವನ್ನುಂಟಾಗಿಸಿ ಆ ಮೂಲಕ ಬುದ್ಧಿಯನ್ನು ಅರಳಿಸಬಲ್ಲ ವಾಕ್ಯ ಸಮೂಹವೇ ಕಾವ್ಯ.

ಜೀವದ ಕೊಳೆ ಕಶ್ಮಲಗಳನ್ನು ತೊಳೆಯಬಲ್ಲ ತೀರ್ಥವೆಂದರೆ ಕಾವ್ಯತೀರ್ಥ. ಕಾವ್ಯವೆಂದರೆ ಕಥೆ, ಕಾದಂಬರಿ, ನಾಟಕ, ಹಾಡು, ಪದ್ಯ ಇವೇ ಮೊದಲಾದ ಮನಃ ಪರಿವರ್ತಕ ಪ್ರಭಾವವುಳ್ಳ ಸಾಹಿತ್ಯ. ಸ್ವಾತಂತ್ರ್ಯ ಸಿಕ್ಕ ಹೊಸದರಲ್ಲಿ ಅನೇಕ ಕವಿ, ಸಾಹಿತಿಗಳೂ ಚುನಾವಣೆಯಲ್ಲಿ ಸ್ಪರ್ಧಿಸಿದರು. ಆಗ ಅವರು ಓಟು ಕೇಳುವ ರೀತಿಯೂ ಕಾವ್ಯಾತ್ಮವಾಗಿತ್ತಂತೆ.

'ನನ್ನಗೆದಿಸಲು ನಿಮಗೆ ಸಕಲ ಸಂಪತ್ತು
ಇನ್ಯಾರು ಗೆದ್ದರೂ ತಪ್ಪದು ನಿಮಗೆ ವಿಪತ್ತು'

ಹೀಗೆ ಮಾತನಾಡಿದರೆ ಅದು ವಿನಯವೆ? ಘನತೆಯೆ? ಆದರೆ ಇಂಥ ಮಾತಿಲ್ಲದೇ ಪ್ರಜಾರಾಜಕೀಯದಲ್ಲಿ ಜಯ ದುರ್ಲಭ.

ಇನ್ನು ಕನ್ನಡದ ಮಧ್ಯೆ ಇಂಗ್ಲೀಷ್ ತುರುಕುವ, ತನಗೆ ಕನ್ನಡ ಬಾರದು ಇಂಗ್ಲೀಷೇ ಬರುತ್ತದೆ ಎಂದು ತೋರಿಸಿಕೊಳ್ಳುವುದೇ ಒಂದು ದೊಡ್ಡತನ. ಇದು 1947–50 ರಿಂದಲೇ ಆರಂಭವಾಗಿತ್ತು ಎಂಬುದನ್ನು ಶ್ರೀ ಡಿ.ವಿ.ಜಿ ಯವರು ಒಂದು ಹಾಸ್ಯ ಪ್ರಸಂಗದ ಮೂಲಕ ಬಹು ಚೆನ್ನಾಗಿ ವಿವರಿಸಿದ್ದಾರೆ. ಒಬ್ಬ ಡಾಕ್ಟರ ಬಳಿ ಒಬ್ಬ ವ್ಯಕ್ತಿ ಬಂದ, ಡಾಕ್ಟರೆದುರಿಗೆ ತನಗೆ ಇಂಗ್ಲೀಷ್ ಬರುತ್ತದೆ ಎಂದು ತೋರಿಸಿಕೊಳ್ಳೊ ಹಮ್ಮು, ಆದರೆ ಡಾಕ್ಟರಾಗಿದ್ದರೂ ಡಿ.ವಿ.ಜಿ ಸ್ನೇಹಿತರಿಗೆ ಕನ್ನಡದ ಬಗ್ಗೆ ವಿಶೇಷ ಅಭಿಮಾನ, ಬಂದ ವ್ಯಕ್ತಿ 'ಡಾಕ್ಟರ್ ಸರ್, ನನ್ನ ವೈಫ್‌ಗೆ ನಿನ್ನೆ ನೈಟು ಫಿವರ್ ಬಂದು, ಫೋರ್-ಫೈವ್ ಟೈಮ್ಸ್ ವಾಮಿಟ್ ಆಯಿತು. ತಾವು ಸ್ವಲ್ಪ, ಎಕ್ಸಾಮಿನ್ ಮಾಡಿ ಪ್ರಾಪರ್, ಅಪ್ರೋಪ್ರಿಯೇಟ್ ಮೆಡಿಸಿನ್ಸ್ ಕೊಡಬೇಕು' ಎಂದನಂತೆ. ಅದಕ್ಕೆ ಆ ಡಾಕ್ಟರ್ ಸ್ನೇಹಿತರು 'ಓಕೆ, ಆಕೆ ಕಮ್ ಮಾಡಿದರೆ, ನಾನು ಇಲ್ಲಿ ಸಿಟ್ ಮಾಡಿಸಿ, ಸೀ ಮಾಡಿ, ಮೆಡಿಸಿನ್ ಕೊಡುತ್ತೇನೆ' ಎಂದರಂತೆ.

ಇಂದಿಗೂ ಇಂಥವರಿದ್ದಾರೆ. ಹಳ್ಳಿಗಾಡಿನಲ್ಲಿ ಹುಟ್ಟಿ ಬಂದು ಬಿ.ಎ ನೋ, ಎಂ.ಎ ನೋ ಮಾಡಿಕೊಂಡರೆ ಸಾಕು, ಮಾತನಾಡುವಾಗ, ಭಾಷಣ ಮಾಡುವಾಗ ಈಗಲೂ ಅನೇಕ ಲೆಕ್ಚರರ್‌ಗಳು, ಪ್ರೊಫೆಸರ್‌ಗಳು ಮಾತು ಮರೆತಾಗ 'ವಾಟ್ ಯು ಸೇ ಇನ್ ಯುವರ್ ಕನ್ನಡ' ಎಂದು ಪ್ರೇಕ್ಷಕರನ್ನೇ ಕೇಳುತ್ತಾರೆ. ಅದು ನಮ್ಮ ಅಂದರೆ, ಪ್ರೇಕ್ಷಕರ ಕನ್ನಡವಂತೆ, ತಾವು ಮೋಟಗಾನ ಹಳ್ಳಿಯಿಂದ ಬಂದಿದ್ದರೂ, ಮ್ಯಾಂಚೆಸ್ಟರ್‌ನಿಂದ ಬಂದವರಂತೆ ಆಡುತ್ತಿರುತ್ತಾರೆ.

ಒಟ್ಟಿನಲ್ಲಿ ಡಿ.ವಿ.ಜಿ ಯವರ ಹನ್ನೆರೆಡು ಉಪನ್ಯಾಸಗಳ ಪುಸ್ತಕ ಸಾಹಿತ್ಯ ಶಕ್ತಿ ಓದಲು ಬರುವ ಪ್ರತಿಯೊಬ್ಬ ಕನ್ನಡಿಗನೂ ಓದುವಂಥ ಕೃತಿ. ನಾನು ಇದನ್ನು ಆಗಾಗ ಓದುತ್ತಲೇ ಇರುತ್ತೇನೆ. ಈಗೊಂದೊರೆಡು ವರ್ಷಗಳ ಹಿಂದೆ ಅರ್ಥವಾಗದ ಕೆಲವು ಅಧ್ಯಾಯಗಳು, ನನ್ನ ಪ್ರವಾಸ, ಬೇರೆಯವರ ಪುಸ್ತಕ ಓದುವಿಕೆ, ನಾನೇ ಲೇಖನ ಬರೆಯಬೇಕಾಗಿರುವ ಅಂಕಣಗಳಿಗಾಗಿ, ಇದನ್ನು ಆಗಾಗ ಓದಿದರೆ ಹಿಂದೆ ಅರ್ಥವಾಗದ ಕೆಲವು ಸಾಲುಗಳು ಈಗ ಬೇಗ ಅರ್ಥವಾಗುತ್ತಿವೆ ಎಂದರೆ, ನಮ್ಮ ಅನುಭವವೂ ನಮ್ಮ ಮೆದುಳಿಗೆ ಚೈತನ್ಯ ತುಂಬಿ ಅವರ ಅನುಭವಗಳಿಗೆ ಹತ್ತಿರವಾಗಿ ಈ ಜ್ಞಾನ ಬರುತ್ತದೆ ಎನಿಸುತ್ತಿದೆ. ಓದು ಬೇರೆ, ಜ್ಞಾನ ಬೇರೆ ಎಂಬ ಸತ್ಯದ ಅರಿವಾಗುವಂತಹ ಇಂತಹ ಪುಸ್ತಕಗಳನ್ನು, ಡಿ.ವಿ.ಜಿ ಯಂಥವರ ಪುಸ್ತಕಗಳನ್ನು ಓದಿದಾಗ ಅವರಂಥಾಗದಿದ್ದರೂ ಅವರನ್ನು ಅರ್ಥ ಮಾಡಿಕೊಳ್ಳಲಾರಂಭಿಸಿದೆವಲ್ಲ ಎಂಬ ಧನ್ಯತೆ ಉಂಟಾಗುತ್ತದೆ, ಅವರ ಆತ್ಮಗಳೂ ಕೂಡಾ ಈಗ ಎಲ್ಲೇ ಇರಲಿ, ನಾನು ಬರೆದದ್ದೂ ಸಾರ್ಥಕವಾಯಿತು ಎಂದು ಹಿಗ್ಗುತ್ತವೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ ಎಂಬ ಮಾತಿಗೂ ಅರ್ಥ ಇದೆ ಇರಬಹುದೇನೋ ಎನಿಸುತ್ತದೆ ಕೂಡಾ.